- - **O.S. 57/2016**

ಶ್ರೀ ಸಂತೋಷ್ ಕುಮಾರ್ ಎಸ್, ವಕೀಲರು, ಮೃತ ವಾದಿಯ ವಾರಸುದಾರರ ಪರವಾಗಿ ವಕಾಲತ್, ಮಧ್ಯಂತರ ಅರ್ಜಿ **4**, ದಿವಾಣಿ ಪ್ರಕಿಯಾ ಸಂಹಿತೆ ಕ್ರಮಾದೇಶ **22** ನಿಯಮ **4** ಜೊತೆಗೆ ಕಲಂ **151** ರಡಿ ಸಲ್ಲಿಸಿದ್ದು, ಮೃತ ವಾದಿಯ ವಾರಸುದಾರರನ್ನು ಈ ದಾವೆಯಲ್ಲಿ ಮೃತ ವಾದಿಯ ವಾರಸುದಾರರಾಗಿ ವಾದಿಗಳಾಗಿ ಸೇರ್ಪಡೆಯಾಗಿ ದಾವೆ ಮುಂದುವರೆಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಪ್ರತಿವಾದಿ **1** ಮತ್ತು **2** ರವರ ವಕೀಲರು ಮಧ್ಯಂತರ ಅರ್ಜಿ **4** ಕ್ಕೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಅರ್ಜಿದಾರರು ಮೃತ ವಾದಿಯ ಪತ್ನಿ ಮತ್ತು ಮಕ್ಕಳಾಗಿದ್ದು, ಈ ದಾವೆ ಮೃತ ವಾದಿ ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿ ಆಸ್ತಿಯಲ್ಲಿ ಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿದ್ದು ಮೃತ ವಾದಿ ದಿಃ**17.03.2018** ರಂದು ಮೃತರಾಗಿದ್ದು ಈ ಅರ್ಜಿಯನ್ನು ಕಾಲಮಿತಿಯ ನಿಗದಿತ ಸಮಯದೊಳಗೆ ಸಲ್ಲಿಸಿದ್ದು ಅರ್ಜಿದಾರರುಗಳಿಗೆ ಈ ದಾವೆ ಮುಂದುವರೆಸುವ ಹಕ್ಕು ಉಳಿದಿದ್ದು ಆದ್ದರಿಂದ ಈ ಕೆಳಗಿನಂತೆ

## ಆದೇಶ

**ಮಧ್ಯಂತರ ಅರ್ಜಿ 4, ದಿವಾಣಿ ಪ್ರಕಿಯಾ ಸಂಹಿತೆ ಕ್ರಮಾದೇಶ 22 ನಿಯಮ 4 ಜೊತೆಗೆ ಕಲಂ 151 ರಡಿ ಅರ್ಜಿದಾರರು ಸಲ್ಲಿಸಿರುವುದನ್ನು ಪುರಸ್ಕರಿಸಿರುತ್ತದೆ.**

**ಮೃತ ವಾದಿಯ ವಾರಸುದಾರರನ್ನು ಈ ದಾವೆಯಲ್ಲಿ ಮೃತ ವಾದಿಯ ವಾರಸುದಾರರಾಗಿ ವಾದಿಗಳಾಗಿ ಸೇರ್ಪಡೆಯಾಗಿ ದಾವೆ ಮುಂದುವರೆಸಲು ಅನುಮತಿ ನೀಡಿರುತ್ತದೆ.**

**ತಿದ್ದುಪಡಿ ಮಾಡಲು.**

ಮತ್ತೊಮ್ಮೆ ಕರೆಯುವುದು.

(ಜಿ. ರಾಘವೇಂದ್ರ )
ಪ್ರಧಾನ ಹಿರಿಯ ವ್ಯ. ನ್ಯಾ. ಮತ್ತು ಪ್ರ.ದ. ನ್ಯಾದಂಡಾಧಿಕಾರಿಗಳು,
ಸಾಗರ .